ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋನ್ : 114

೬ನೇ ವರ್ಷ 18ನೇ ಸಂಚಿಕೆ ಕೊಪ್ಪ 24-12-1989 ಭಾನುವಾರ ಬೆಲೆ 60 ಪೈಸೆ

ಗಂಧ ಕಳ್ಳರು ಹಲ್ಲೆ ಎಸಗಿದರೂ ಧೃತಿಗೆಡದ ಅರಣ್ಯ ಸಿಬ್ಬಂದಿ:

280 ಕಿಲೊ ಗಂಧ ವಶ, 6 ಜನರ ಸೆರೆ

ಕಳಸ: ಇಲ್ಲಿಗೆ ಸಮೀಪದ ಸಂಪಿಗೆಕಟ್ಟೆಯಲ್ಲಿ ಡಿ. 12ರ ರಾತ್ರಿ ತಲೆ ಹೊರೆಯ ಮೇಲೆ ಗಂಧ ಕದ್ದು ಸಾಗಿಸುತ್ತಿದ್ದ ಕಾಜೂರಿನ ಅಬ್ದುಲ್ ರೆಹಮಾನ್, ಬೈಜು, ಮ್ಯಾಥ್ಯೂಸ್, ಸಿಲ್ವೆಸ್ಟರ್ ಡಿ'ಸೋಜ, ಸೀನ, ಬಾಬು ಎಂಬವರು ತಮ್ಮನ್ನು ಹಿಡಿಯಲು ಬಂದ ವನಪಾಲಕ ಕೆ.ಎನ್. ಮಂಜುನಾಥ್, ಗಾರ್ಡ್‌ಗಳಾದ ನಾಗೇಶಗೌಡ, ವೆಂಕಟೆ ನಾಯ್ಕ, ಸಣ್ಣ ಸಿದ್ಧಪ್ಪ, ಅರಣ್ಯ ವೀಕ್ಷಕರಾದ ಹುಸೇನ್, ಈಶ್ವರ, ದೋಬಿ ಮತ್ತು ಡ್ರೈವರ್ ಗಂಗಣ್ಣ ಇವರುಗಳ ಮೇಲೆ ಹಲ್ಲೆ ನಡೆಸಿದರೂ ಧೃತಿಗೆಡದ ಸಿಬ್ಬಂದಿಗಳು ಆರು ಜನರನ್ನೂ ಬಂಧಿಸಿ, 30 ಸಾವಿರ ರೂ. ಬೆಲೆಯ 280 ಕಿಲೋ ಗಂಧವನ್ನು ವಶಪಡಿಸಿಕೊಂಡರು.

ಆರೋಪಿಗಳನ್ನು ಮೂಡಿಗೆರೆಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಈ ಗಂಧವನ್ನು ತಲೆ ಹೊರೆಯ ಮೇಲೆ ಬೆಳ್ತಂಗಡಿ ತಾಲ್ಲೂಕಿನ ಕಾಜೂರಿಗೆ ಸಾಗಿಸಲಾಗುತ್ತಿದ್ದು, ಈ ಕೃತ್ಯದಲ್ಲಿ ಕಳಸದ ಇನಾಸ್ ಲೋಬೋ ಎಂಬವನ ಮುಖ್ಯ ಕೈವಾಡವಿದೆಯೆಂದು ಶಂಕಿಸಲಾಗಿದೆ. ಕಳಸ ವಲಯ ಅರಣ್ಯಾಧಿಕಾರಿ ಕೆ. ರಾಧಾಕೃಷ್ಣ ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಪರವಾನಗಿ ನವೀಕರಣಕ್ಕಾಗಿ ಎಲ್ಲ ಬಗೆಯ ಬಂದೂಕುಗಳ ಪರಿಶೀಲನೆ ತಾ|| ಕಛೇರಿಯಲ್ಲೇ

ಕೊಪ್ಪ : ಈಗಾಗಲೇ ಪರವಾನಗಿ ಹೊಂದಿರುವ ಎಲ್ಲ ಬಗೆಯ ಬಂದೂಕುಗಳ ಪರವಾನಗಿ ನವೀಕರಣಕ್ಕಾಗಿ ಇನ್ನು ಮುಂದೆ ರೈತರು ಬಂದೂಕುಗಳನ್ನು ಜಿಲ್ಲಾ ಕೇಂದ್ರಕ್ಕೆ ಒಯ್ಯಬೇಕಾಗಿಲ್ಲ

ಎಲ್ಲ ಬಗೆಯ ಬಂದೂಕುಗಳ ಪರವಾನಗಿ ನವೀಕರಣದ ಅಧಿಕಾರ ಜಿಲ್ಲಾಧಿಕಾರಿಗಳದೇ ಆದರೂ, ಅದಕ್ಕಾಗಿ ಈಗಾಗಲೇ ನೀಡಲಾಗಿರುವ ಪರವಾನಗಿಗೆ ಅನುಗುಣವಾಗಿ **ಬಂದೂಕುಗಳ ಪರಿಶೀಲನೆಯನ್ನು** ಆಯಾ ತಾಲ್ಲೂಕು ತಹಸೀಲ್ದಾರರೇ ನಡೆಸುತ್ತಾರೆ. ಈ ಬಗ್ಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ತಮ್ಮ ಪತ್ರ ಸಂಖ್ಯೆ ಜಿ2 ಸಿಆರ್. 216/89-90 ದಿನಾಂಕ 15-12-89ರನ್ವಯ ಆದೇಶ ನೀಡಿದ್ದಾರೆ.

ಆದರೆ, ಹೊಸ ಬಂದೂಕು ಪರವಾನಗಿಗಾಗಿ ಬಂದೂಕುಗಳನ್ನು ಜಿಲ್ಲಾಧಿಕಾರಿಗಳೆದುರೇ ಹಾಜರ್ಪಡಿಸಬೇಕಾಗುವುದು.

ಹಳ್ಳಿಗಾಡಿನಲ್ಲಿ ಹೆಚ್ಚು ಪ್ರಚಲಿತವಿರುವ ಕೇಪಿನ ಕೋವಿಗಳ ಲೈಸೆನ್ಸ್ ನವೀಕರಣ ಈವರೆಗೆ ತಾ|| ಕಛೇರಿಯಲ್ಲೇ ಆಗುತ್ತಿದ್ದು, ಈ ವರ್ಷದಿಂದ ಎಲ್ಲ ಬಗೆಯ ಬಂದೂಕುಗಳ ಲೈಸೆನ್ಸ್ ನವೀಕರಣದ ಅಧಿಕಾರವು ಜಿಲ್ಲಾಧಿಕಾರಿಗಳಿಗೆ ಮಾತ್ರ ಇರುವಂತಾಗಿತ್ತು. ಆದರೆ ಇದಕ್ಕಾಗಿ ದೂರದೂರುಗಳಿಂದೆಲ್ಲ ಬಂದೂಕುಗಳನ್ನು ಜಿಲ್ಲಾ ಕೇಂದ್ರಕ್ಕೆ ಒಯ್ಯುವುದು ತುಂಬ ಪ್ರಯಾಸ ಮತ್ತು ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿರುವ ಬಗ್ಗೆ ಎಲ್ಲೆಡೆಯಿಂದ ವ್ಯಾಪಕ ದೂರುಗಳು ಬಂದಿದ್ದವು. ಈ ಕುರಿತು ಶಾಸಕ ಶಾಮಣ್ಣ ಅವರು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಈ ಸಮಸ್ಯೆ ನಿವಾರಣೆಗೆ ಮಾರ್ಗೋಪಾಯವೊಂದನ್ನು ರೂಪಿಸುವಲ್ಲಿ ನೆರವಾಗಿದ್ದರು.

ಮರು ಆದೇಶ

ಇದನ್ನನುಸರಿಸಿ ಜಿಲ್ಲಾಧಿಕಾರಿಗಳು ಹೊರಡಿಸಿರುವ ಮೇಲ್ಕಂಡ ಆದೇಶದಂತೆ, ತಹಸೀಲ್ದಾರರು ಬಂದೂಕನ್ನು ಪರಿಶೀಲಿಸಿ, ಪರವಾನಗಿಯಲ್ಲಿರುವ ಅಂಶಗಳಿಗೆ ತಾಳೆ ನೋಡಿ ಪ್ರಮಾಣೀಕರಿಸುವರು. ಅದನ್ನೂ, ನವೀಕರಣಕ್ಕಾಗಿ ಶುಲ್ಕ ಕಟ್ಟಿದ ಚಲನ್ನನ್ನೂ ಅರ್ಜಿದಾರರ ಅರ್ಜಿಯ ಜೊತೆ ಜಿಲ್ಲಾಧಿಕಾರಿಗಳಿಗೆ ಕಳಿಸಿಕೊಟ್ಟ ನಂತರ, ನವೀಕರಿಸಲ್ಪಟ್ಟ ಪರವಾನಗಿ ಪುನಃ ತಹಸೀಲ್ದಾರ ಮೂಲಕವೇ ಅರ್ಜಿದಾರರಿಗೆ ದೊರೆಯುವುದು.

ಉಪಯುಕ್ತ

ಸರಳಗೊಳಿಸಿದ ಈ ಕ್ರಮ ಸಾವಿರಾರು ರೈತರಿಗೆ ಅತ್ಯಂತ ಉಪಯುಕ್ತವಾಗಲಿದೆ. ಇಲ್ಲವಾದಲ್ಲಿ, ಪ್ರತಿಯೊಬ್ಬ ರೈತನೂ ತನ್ನ ಬಂದೂಕನ್ನು ಜಿಲ್ಲಾಧಿಕಾರಿಗಳೆದುರು ಹಾಜರ್ಪಡಿಸಿ ಲೈಸೆನ್ಸ್ ನವೀಕರಿಸಿಕೊಳ್ಳಲಾಗದೆ ಎಷ್ಟೋ ಜನರ ಲೈಸೆನ್ಸೇ ರದ್ದಾಗುವ ಸಂಭವವಿತ್ತು. ಅದಕ್ಕಿಂತ ಹೆಚ್ಚಾಗಿ, ತಾ|| ಕಚೇರಿಗಳಲ್ಲಿ ಕೇವಲ ಹತ್ತೈವತ್ತು ರೂ.ಗಳಲ್ಲಿ "ಆಗುತ್ತಿದ್ದ" ಕೆಲಸಕ್ಕಾಗಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ರೈತರು ನೂರಾರು ರೂ ಗಳನ್ನು ಚೆಲ್ಲಬೇಕಾಗುತ್ತಿತ್ತು ಎಂಬುದು ಬಹಿರಂಗ ಸತ್ಯ.

ಸಮಸ್ಯೆಯ ಬಾಲ

ಹೀಗೆ ಸಮಸ್ಯೆಯ ಮುಖ್ಯ ಭಾಗ ಬಗೆಹರಿದಿದ್ದರೂ ಅದರ 'ಬಾಲ' ಇನ್ನೂ ಒಂದು ಚೂರು ಸಿಕ್ಕಿ ಹಾಕಿಕೊಂಡಿದೆ. ನವೀಕರಿಸಿದ ಪರವಾನಗಿಗಳನ್ನು ಅರ್ಜಿದಾರರೇ ಖುದ್ದಾಗಿ ಅಥವಾ ತಮ್ಮ ಪ್ರತಿನಿಧಿಗಳನ್ನು ಕಳಿಸಿ ಕೊಟ್ಟು ಜಿಲ್ಲಾಧಿಕಾರಿಗಳ ಕಛೇರಿಯಿಂದಲೇ ಪಡೆಯುವುದು ಕ್ಷೇಮ ಎಂದು ಜಿಲ್ಲಾಧಿಕಾರಿ ಕಛೇರಿಯ ಸಿಬ್ಬಂದಿಯೊಬ್ಬರು 'ಮುಂಜಾವು'ಗೆ ತಿಳಿಸಿದರು.

ಅಂಚೆಯಲ್ಲಿ ತಾಲ್ಲೂಕು ಕಛೇರಿಗೆ ಕಳಿಸಿದ್ದು ಕಳೆದು ಹೋಗಬಹುದು ಎಂಬುದು ಇದರ ಉದ್ದೇಶವಾದರೂ, ಅಂತಿಮವಾಗಿ ಇದು ಕೂಡ ಅರ್ಜಿದಾರರಿಗೆ ಕಿರುಕುಳಕ್ಕೆ, ಭ್ರಷ್ಟಾಚಾರಕ್ಕೆ, ಒಟ್ಟಿನಲ್ಲಿ ಸಮಸ್ಯೆ ಉಲ್ಬಣಿಸುವುದಕ್ಕೆ ಕಾರಣವಾಗುವುದರಲ್ಲಿ ಸಂಶಯವಿಲ್ಲ.

ನಿವಾರಣೆ ಅಗತ್ಯ

ಇದನ್ನು ನಿವಾರಿಸಲು, ರಿಜಿಸ್ಟರ್ಡ್ ಅಂಚೆಯ ಮೊಬಲಗನ್ನು ನಿರ್ಧರಿಸಿ ಅದನ್ನೂ ಅರ್ಜಿದಾರರಿಂದ ನವೀಕರಣ ಶುಲ್ಕದ ಜೊತೆಗೇ ಕಟ್ಟಿಸಿಕೊಳ್ಳುವುದು ಹಾಗೂ ನವೀಕರಿಸಿದ ಪರವಾನಗಿಗಳನ್ನು ಬಿಡಿಬಿಡಿಯಾಗಿ ತಾ|| ಕಛೇರಿಗೆ ಕಳಿಸುವ ಬದಲು ಒಂದೊಂದು ಗುಂಪಾಗಿ ('ಬ್ಯಾಚ್' ಅಥವಾ ಸೆಟ್') ಕಳಿಸುವುದು— ಇಂಥ ಯಾವುದಾದರೂ ಮಾರ್ಗೋಪಾಯವನ್ನು ರೂಪಿಸಬೇಕು. ಹೊರತು, ಎಲ್ಲವೂ ಕ್ರಮಬದ್ಧವಾಗಿರುವ ಯಾವುದೇ ಪ್ರಕರಣದಲ್ಲೂ ಅರ್ಜಿದಾರರನ್ನು ಅಲೆದಾಡಿಸಲು ಅವಕಾಶವಿರಬಾರದು. ಶಾಸಕರು ಇದನ್ನೂ ಗಮನಿಸುವುದೊಳಿತು.

ಶೃಂಗೇರಿ ಸಿಂಡಿಕೇಟ್ ಬ್ಯಾಂಕ್ ಯಶಸ್ವಿ ಜಾನುವಾರು ಶಿಬಿರ

ಶೃಂಗೇರಿ : ಇಲ್ಲಿನ ಸಿಂಡಿಕೇಟ್ ಬ್ಯಾಂಕ್, ಪಶು ವೈದ್ಯ ಇಲಾಖೆ ಮತ್ತು ನ್ಯೂ ಇಂಡಿಯಾ ಇನ್ಶ್ಯೂರೆನ್ಸ್‌ಗಳ ಸಹಯೋಗದಲ್ಲಿ ಡಿ. 13ರಂದು ತಾಲ್ಲೂಕಿನ ಅತಿ ಮೂಲೆಯಾದ ಕೆರೆಕಟ್ಟೆಯಲ್ಲಿ ಜಾನುವಾರುಗಳ ಪ್ರದರ್ಶನ, ಪರೀಕ್ಷೆ ಹಾಗೂ ಉಚಿತ ಚಿಕಿತ್ಸೆಯ ಶಿಬಿರವನ್ನು ಯಶಸ್ವಿಯಾಗಿ ನಡೆಸಿತು

ಸುತ್ತಮುತ್ತಲಿನ ರೈತರ ಜಾನುವಾರುಗಳಿಗೆ ಪರೀಕ್ಷೆ ಮತ್ತು ಚಿಕಿತ್ಸೆ ನಡೆಸಿದ ಶೃಂಗೇರಿಯ ಪಶು ವೈದ್ಯರುಗಳಾದ ಡಾ|| ಶಂಕರನಾರಾಯಣ ಶೆಟ್ಟಿ ಡಾ|| ಸಿ. ನಾಗರಾಜ್ ಮತ್ತು ಡಾ|| ಪರಮೇಶ್ವರಪ್ಪ ಜಾನುವಾರುಗಳ ಉತ್ತಮ ಸಾಕಣೆ ಮತ್ತು ಆಧುನಿಕ ರೀತಿಯಲ್ಲಿ ಮೊಲ, ಹಂದಿ, ಕೋಳಿಗಳ ಸಾಕಣೆ ಕುರಿತು ಮಾಹಿತಿ ನೀಡಿದರು

ಚಿ ಕೊ. ಗ್ರಾಮೀಣ ಬ್ಯಾಂಕ್ ಮೆನೇಜರ್ ಪ್ರಕಾಶ್ ಹಾಗೂ ಶೃಂಗೇರಿ ಸಿಂಡಿಕೇಟ್ ಬ್ಯಾಂಕಿನ ಗ್ರಾಮಾಭಿವೃದ್ಧಿ ಅಧಿಕಾರಿ ಮಾಣಿಕ್ಯ ಸುಂದರಂ ಮಾತನಾಡಿದರು.

ನ್ಯೂ ಇಂಡಿಯಾ ಇನ್ಶ್ಯೂರೆನ್ಸ್ ಕಂಪೆನಿ ಕ್ಷೇತ್ರಾಧಿಕಾರಿ ವೀರಣ್ಣ ಸಾಮಾನ್ಯ ವಿಮೆಯ ಬಗ್ಗೆ ವಿವರಿಸಿದರು. ಕಂಪೆನಿ ಈ ಬಾರಿಯೂ ಉತ್ತಮ ರಾಸುಗಳಿಗೆ ಬಹುಮಾನಗಳನ್ನು ನೀಡಿತು

ಮುಖ್ಯ ಅತಿಥಿಯಾಗಿದ್ದು, ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ಮಾಡಿದ ಸಿಂಡಿಕೇಟ್ ಬ್ಯಾಂಕ್ ವಿಭಾಗೀಯ ಅಧಿಕಾರಿ ಬಿ. ಕೆ. ನಾಯಕ್, ಸಿಂಡಿಕೇಟ್ ಬ್ಯಾಂಕ್ ಈ ವರ್ಷ ಕೃಷಿಗೆ ಸಾಲ ನೀಡಿಕೆಯ ಬೆಳ್ಳಿ ಹಬ್ಬವನ್ನು ಆಚರಿಸುತ್ತಿರುವುದನ್ನು ತಿಳಿಸಿ, 'ಹಸಿರು ಕ್ರಾಂತಿ'ಯ ಸಾಧನೆಯಲ್ಲಿ ಸಿಂಡಿಕೇಟ್ ಬ್ಯಾಂಕಿನ ಪಾತ್ರವನ್ನು ಒತ್ತಿ ಹೇಳಿದರು. ಈ ನಿಟ್ಟಿನಲ್ಲಿ ದಿ|| ಟಿ ಎ ಪೈಯವರ ಕಳಕಳಿಯ ಪ್ರಯತ್ನವನ್ನು ಅವರು ಸ್ಮರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನೆಮ್ಮಾರು ಮಂಡಲ ಪ್ರಧಾನ ಎಂ. ಜಿ. ಸುಧಾಕರ ಹೆಗ್ಡೆ, ಸಿಂಡಿಕೇಟ್ ಬ್ಯಾಂಕು ಕೆರೆಕಟ್ಟೆಯಲ್ಲಿ ಕಳೆದ ಐದು ವರ್ಷಗಳಿಂದ ನಡೆಸುತ್ತಿರುವ ಕೃಷಿ ಚಿಕಿತ್ಸಾಲಯವನ್ನೂ ವೈದ್ಯಕೀಯ ಸೇವೆಯೇ ಅಲಭ್ಯವಾಗಿರುವ ಇಂಥ ಹಳ್ಳಿಯಲ್ಲಿ ಇಂತಹ ಉಪಯುಕ್ತ ಕಾರ್ಯಕ್ರಮ ನಡೆಸಿದ್ದನ್ನೂ ಪ್ರಶಂಸಿಸಿದರು.

ಶೃಂಗೇರಿ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಪಿ. ರಮಾನಾಥ ಪೈ ಸ್ವಾಗತಿಸಿ, ಕ್ಷೇತ್ರ ಸಹಾಯಕ ಎಚ್. ಎಸ್. ಶಿವಸ್ವಾಮಿ ವಂದಿಸಿದರು.

ಕೊಪ್ಪದ ಸಂತ ಜೋಸೆಫ್ ಕಾನ್ವೆಂಟ್ ಪ್ರೌಢಶಾಲೆಗೆ ಬೆಳ್ಳಿ ಹಬ್ಬದ ಬಣ್ಣದ ಸಡಗರ!

ಮೊನ್ನೆ ತಾ॥ 14, 15 ಮತ್ತು 16 ರಂದು ತನ್ನ ಬೆಳ್ಳಿ ಹಬ್ಬವನ್ನು ಆಚರಿಸಿದ ಕೊಪ್ಪದ ಸಂತ ಜೋಸೆಫರ ಕಾನ್ವೆಂಟ್ ಶಾಲೆ ಚಿಕ್ಕಮಗಳೂರು ಜಿಲ್ಲೆಯ ಅತ್ಯುತ್ತಮ ಶಾಲೆಗಳಲ್ಲೊಂದೆಂದು ಹೆಸರಾಗಿರುವಂಥದು.

ಅಡಿಗಲ್ಲು !

ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಅಷ್ಟೇನೂ ಉತ್ತೇಜನವಿಲ್ಲದಿದ್ದ ಕಾಲದಲ್ಲಿ, ಅದರಲ್ಲೂ 'ತಪ್ಪು ಮಾಡಿದವರನ್ನು ಕೊಪ್ಪಕ್ಕೆ ಹಾಕು' ಎಂಬ ನಾಣ್ಣುಡಿಗೆ ಕಾರಣವಾಗಿದ್ದಂತಹ ಮಲೆನಾಡಿನ ಈ ಮೂಲೆಯ ಕೊಪ್ಪದಲ್ಲಿ, 1965ರ ಜೂನ್ 1 ರಂದು ಬಾಲಕಿಯರ ಈ ಪ್ರೌಢಶಾಲೆ ತಲೆ ಎತ್ತಿತು. ಮಂಗಳೂರಿನ ಸಂತ ಅರ್ಸುಲೈನ್ ಫ್ರಾನ್ಸಿಸ್ಕನ್ ವಿದ್ಯಾ ಸಂಸ್ಥೆಯು ಆರಂಭಿಸಿದ ಈ ಶಾಲೆಗೆ ಮುಖ್ಯ ಕಾರಣಕರ್ತರು ದಿ॥ ಸಿಸ್ಟರ್ ಬಬೆಲಾ ರವರು. ಅವರ ದೂರ ದೃಷ್ಟಿ ಮತ್ತು ಸಾರ್ಥಕ ಶ್ರಮ ಈ ಶಾಲೆಗೆ ಅಡಿಗಲ್ಲಾದುವು.

ಪ್ರಾರಂಭಕ್ಕೆ ಕೇವಲ 55 ಮಂದಿ ವಿದ್ಯಾರ್ಥಿನಿಯರಿಂದ ಶುರುವಾದ ಈ ಶಾಲೆ, ಮುಖ್ಯೋಪಾಧ್ಯಾಯಿನಿಯರಾಗಿ ದುಡಿದ ಸಿಸ್ಟರ್ ಗರ್ಟ್ರೂಡ್, ಸಿಸ್ಟರ್ ಪೆಟ್ರೀಶಿಯಾ ಮತ್ತು ಸಿಸ್ಟರ್ ನೋನಿಟಾ ಇವರುಗಳ ಸೇವಾ ಮನೋಭಾವ ಮತ್ತು ಕರ್ತವ್ಯ ನಿಷ್ಠೆಯಿಂದಾಗಿ ಸತತವಾಗಿ ಅಭಿವೃದ್ಧಿ ಪಥದಲ್ಲಿ ನಡೆದುಕೊಂಡು ಬಂದಿದೆ.

ಬಾಲಕರಿಗೆ ಪ್ರವೇಶ

ಸಿಸ್ಟರ್ ನೋನಿಟಾರವರ ಪ್ರಯತ್ನದಿಂದ 1985ರಲ್ಲಿ ಈ ಶಾಲೆಗೆ ಬಾಲಕರಿಗೂ ಪ್ರವೇಶ ದೊರಕಿತು. ಇದರಿಂದ ಮಕ್ಕಳ ತಂದೆ-ತಾಯಿ-ಪೋಷಕರ ಬಹು ದಿನಗಳ ಬೇಡಿಕೆಯೊಂದು ಈಡೇರಿದಂತಾಯಿತು. ಇದೀಗ ಈ ಶಾಲೆಯಲ್ಲಿ 400 ಕ್ಕೂ ಹೆಚ್ಚು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ.

ಅಷ್ಟೇ ಅಲ್ಲದೆ, ಈ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ಈಗ 2ನೇ ಬಾರಿ ಸೇವೆ ಸಲ್ಲಿಸುತ್ತಿರುವ ಸಿಸ್ಟರ್ ಗರ್ಟ್ರೂಡ್ ರವರ ಅವಿರತ ಪರಿಶ್ರಮದಿಂದ ಈ ವರ್ಷವಷ್ಟೇ ಶಾಲೆ ಸುಸಜ್ಜಿತವಾದ ಹೊಸ ಕಟ್ಟಡದಲ್ಲಿ ನೆಲೆಸುವಂತಾಗಿದೆ. ಇದಕ್ಕಾಗಿ ಮಾತೃಸಂಸ್ಥೆಯ ಸಹಾಯ, ಸಾರ್ವಜನಿಕರ ವಂತಿಗೆ ಮಾತ್ರವಲ್ಲದೆ, ಚಿಕ್ಕಮಗಳೂರಿನ ಕ್ರೈಸ್ತ ಧರ್ಮಾಧ್ಯಕ್ಷರಾದ ರೈಟ್ ರೆವರೆಂಡ್ ಡಾ॥ ಜೆ. ಬಿ. ಸಿಕ್ವೇರಾರವರು 50 ಸಾವಿರ ರೂ ಗಳ ಧನ ಸಹಾಯ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.

'ಕನ್ನಡ ಕಾನ್ವೆಂಟ್';
'ನೂರಕ್ಕೆ ನೂರು'

ಕಾನ್ವೆಂಟ್ ಎಂದೊಡನೆ ಇಂಗ್ಲಿಷ್ ಮಾಧ್ಯಮ ಶಿಕ್ಷಣ ಎಂಬುದು ಪ್ರಚಲಿತ. ಆದರೆ ಈ ಕಾನ್ವೆಂಟ್ ಶಾಲೆ ಕನ್ನಡ ಮಾಧ್ಯಮದಲ್ಲೇ ನಡೆಯುತ್ತಿರುವುದೊಂದು ವಿಶಿಷ್ಟತೆ.

1973ರಲ್ಲಿ ಈ ಶಾಲೆ ಎಸ್ಸೆಸ್ಸೆಲ್ಸಿಯಲ್ಲಿ 'ನೂರಕ್ಕೆ ನೂರು' ಫಲಿತಾಂಶ ಗಳಿಸಿತ್ತು. 1986-87 ರಲ್ಲಿ ಸಿಸ್ಟರ್ ಗರ್ಟ್ರೂಡ್ ಮತ್ತೊಮ್ಮೆ ಮುಖ್ಯೋಪಾಧ್ಯಾಯಿನಿಯಾಗಿ ಬಂದ ನಂತರ ಪುನಃ ಈ ಅಪರೂಪದ ಸಾಧನೆ ಈ ಶಾಲೆಯದಾಯಿತು ಈ 25 ವರ್ಷಗಳಲ್ಲಿ 10 ಕ್ಕೂ ಹೆಚ್ಚು ಸಲ ಜಿಲ್ಲೆಯಲ್ಲೇ ಅತಿ ಹೆಚ್ಚು ಫಲಿತಾಂಶ ಪಡೆದ ಹೆಮ್ಮೆಯೂ ಈ ಶಾಲೆಯದಾಗಿದೆ

ಬಹುಮುಖ ಪ್ರತಿಭೆ

ಕೊಪ್ಪದಲ್ಲಿಯೇ ಪ್ರಥಮವಾದ ಸುಸಜ್ಜಿತ ಬ್ಯಾಂಡ್ ಸೆಟ್, ಸುಸಜ್ಜಿತ ಸಭಾಂಗಣಗಳನ್ನು ಈ ಶಾಲೆ ಹೊಂದಿದೆ. ಬಾಲಕಿಯರಿಗಾಗಿ ಗೈಡ್ಸ್ ಮತ್ತು ಬೆಳ್ಳಿ

○ ಕೆ. ಎನ್. ಶಿವಾನಂದ

ಹಬ್ಬದ ಈ ವರ್ಷವಷ್ಟೇ ಬಾಲಕರಿಗಾಗಿ ಎನ್.ಸಿ.ಸಿ ತರಬೇತಿಗಳು ಲಭ್ಯವಾಗಿವೆ. 1972 ರಿಂದಲೂ ವಿದ್ಯಾರ್ಥಿ ನಿಲಯದ ಸೌಕರ್ಯವಿದೆ.

ಈ ಶಾಲೆಯ ಹಳೆಯ ವಿದ್ಯಾರ್ಥಿಗಳು ವಿವಿಧ ರಂಗಗಳಲ್ಲಿ ಮಿಂಚಿದ್ದಾರೆ. 1984 ರಲ್ಲಿ ಬೆಂಗಳೂರಿನಲ್ಲಿ ನಡೆದ 'ಮಿನಿ ಒಲಿಂಪಿಕ್ಸ್'ನಲ್ಲಿ ಮೊಟ್ಟಮೊದಲು ಬೆಳಕಿಗೆ ಬಂದ ಈ ಶಾಲೆಯ ಆಗಿನ ವಿದ್ಯಾರ್ಥಿನಿ ಜೆ ಎಸ್. ಗೀತಾ ಇದೀಗ ರಾಷ್ಟ್ರೀಯ ಓಟಗಾರ್ತಿ. ಮಂಗಳೂರು ವಿಶ್ವವಿದ್ಯಾನಿಲಯದ ಎಂ. ಎ. ಯಲ್ಲಿ ಚಿನ್ನದ ಪದಕ ಪಡೆದ ಎಚ್. ಎಸ್. ಸುನೀತಾ ಕೂಡ ಇಲ್ಲಿಯ ಹಳೆಯ ವಿದ್ಯಾರ್ಥಿನಿ.

ಈ ಶಾಲೆಯ ಬಾಲಕ-ಬಾಲಕಿಯರು ಆಟೋಟಗಳಲ್ಲೂ ಉತ್ತಮ ಪ್ರದರ್ಶನಗಳನ್ನು ನೀಡುತ್ತ ಬಂದಿದ್ದಾರೆ. ಈ ವರ್ಷ ಬಾಲ್ ಬ್ಯಾಡ್ಮಿಂಟನ್ ಮತ್ತು ಶಟಲ್ ನಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸಾರ್ಥಕ ಪಯಣ

ಹೀಗೆ 25 ಸಾರ್ಥಕ ವರ್ಷಗಳ ಹಾದಿಯನ್ನು ಸವೆಸಿರುವ ಈ ಶಾಲೆಗೆ ಇರುವ ಒಂದೇ ಒಂದು ಮುಖ್ಯ ಕೊರತೆಯೆಂದರೆ ಸುಸಜ್ಜಿತ ಕ್ರೀಡಾಂಗಣದ್ದು. ಅದು ಈ ಊರಿನ ಕೊರತೆಯೂ ಹೌದು.

'ಬೆಳ್ಳಿಯ ಬಣ್ಣ'

ಇಂಥ ಹೆಮ್ಮೆಯ ಸಾಧನೆಗೆ ಸಂಭ್ರಮಪಟ್ಟುಕೊಳ್ಳುತ್ತಲೇ, ಸವೆಸಿದ ಹಾದಿಯನ್ನೊಮ್ಮೆ ಪರಿಶೀಲಿಸಿ ಮುಂದಿನ ಗೊತ್ತು-ಗುರಿಗಳನ್ನೂ ಗುರುತಿಸಿಕೊಳ್ಳುವಂಥ ಬೆಳ್ಳಿ ಹಬ್ಬ ಮೊನ್ನೆ ಇದೇ 14, 15 ಮತ್ತು 16ರಂದು ನಡೆದಾಗ ಶಾಲೆಗೆ ಬಣ್ಣವೋ ಬಣ್ಣ. ವಿಧವಿಧ ಆಟೋಟ ಸ್ಪರ್ಧೆಗಳು, ವಸ್ತುಪ್ರದರ್ಶನ, ಅಂದವಾದ ಮನರಂಜನಾ ಕಾರ್ಯಕ್ರಮಗಳು, ಕಿಕ್ಕಿರಿದ ಪೋಷಕರ ಮತ್ತು ಅಭಿಮಾನಿಗಳ ಸಮ್ಮುಖದಲ್ಲಿ ನಡೆದವು.

ಈ ಶಾಲೆ ಬೆಳ್ಳಿಹಬ್ಬವನ್ನು ಮಾತ್ರವಲ್ಲ, ಚಿನ್ನದ, ವಜ್ರದ ಹಬ್ಬಗಳನ್ನೂ ದಾಟಿ ಶತಾಯುಷಿಯಾಗಲೆಂದು ಹಾರೈಸೋಣ!

ಪದ್ಯದಂಕಣ

ಶೋಧ

ನಲ್ಲೆ,
ನಿನ್ನ ಕಣ್ಣ ಪ್ರಕಾಶ
ದಲಿ ಇಳಿದು
ಹುಡುಕಲೇ ನೀ ಕಂಡ
ಹೆಣ್ಣುಗಳ ಪ್ರತಿಬಿಂಬ?
ನಿನ್ನ ಮಧು ಸುರಿವ
ತುಟಿಗಳಲಿ ಕದಕಲೇ
ನೀ ಬೆಸೆದ ತುಟಿಗಳು
ಒತ್ತಿದ ಮುದ್ರೆ?
ಬಿಡಿಸಿ ನಿನ್ನೆದೆಯ
ಡೈರಿಯ ಪದರು
ಓದಲೇ ನೀ ಧ್ಯಾನಿಸಿದ
ಹರಿಣಗಳ ಹೆಸರು?
ಛೀ, ನಾನಷ್ಟು ಕೆಟ್ಟವಳಲ್ಲ
ಎಂದುಕೊಂಡರೂ,
ತುಟಿಗೆ ತುಟಿ ಬೆಸೆವ ಮುನ್ನ
ನಿನ್ನ ಕಣ್ಣ ಬೆಳಕಲಿ
ಕರಗುವ ಮುನ್ನ
ತಟ್ಟ ನಿನ್ನ ಚಿತ್ತವನ್ನ
ಶೋಧಿಸದಿರಲಾರೆ
ನಿನ್ನ.

ಬಂಟಿಂಗ್ಸ್

ಪ್ರೀತಿಯೊಂದು
ಬಣ್ಣದ ಕಾಗದ
ಸರಿಯಾದ
ಬಂಟಿಂಗ್ಸ್
ಮಾಡುವ
ಕೈಗಳು ಬೇಕು.

—'ನಾಸು'

ಶೃಂಗೇರಿಯ ನಿರ್ಭಾಗ್ಯ ಯುವತಿ ಆಶ್ರಯ ಧಾಮಕ್ಕೆ

ತನ್ನ ಕುಟುಂಬದವರ ನಿರ್ಲಕ್ಷ್ಯಕ್ಕೆ ತುತ್ತಾಗಿ ಮತಿಭ್ರಮಣೆಗೊಂಡು, ಆಗಾಗ್ಗೆ ಶೃಂಗೇರಿಯ ಬೀದಿಗಳಲ್ಲಿ ಅಲೆಯುತ್ತ ಕಾಮುಕರ ಕ್ರೌರ್ಯಕ್ಕೆ ಸಿಕ್ಕಿ ನಲುಗಿ ಹೋಗುತ್ತಿದ್ದ ಯುವತಿಯನ್ನು ಶಿವಮೊಗ್ಗದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರೇಷಣಾ ಗೃಹಕ್ಕೆ (ಆಶ್ರಯ ಮತ್ತು ಪುನರ್ವಸತಿ ಕೇಂದ್ರಕ್ಕೆ) ಸೇರಿಸಲಾಗಿದೆ.

ಶೃಂಗೇರಿ ತಾ॥ ಗಂಡಘಟ್ಟ ಸಮೀಪದ ಹಳ್ಳಿಯೊಂದರ ಈ ನಿರ್ಭಾಗ್ಯೆಯ ದುಃಸ್ಥಿತಿ ಮತ್ತು ಆಕೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಹಾಗೂ ಈ ವಿಚಾರದಲ್ಲಿ ಸಮಾಜದ ಘೋರ ನಿರ್ಲಿಪ್ತತೆಗಳನ್ನು ವಿವರಿಸಿ 16-7-1989 ರ 'ಮುಂಜಾವು' ನಲ್ಲಿ "ಒಂದು ಹುಚ್ಚು, ಒಂದು ಅಮಾನವೀಯತೆ" ಎಂಬ ಕಲ್ಕುಳಿ ವಿಠಲ ಹೆಗ್ಡೆಯವರ ಲೇಖನ ಪ್ರಕಟವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಅದನ್ನು ಓದಿದೊಡನೆಯೇ ನ. ರಾ. ಪುರದ ಬಿ ಡಿ. ಓ. ಚಿದಾನಂದ ಹೆಗ್ಗಾರ್ ಅವರು (ಮೂಲತಃ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ) ಆಕೆಯ ಆಶ್ರಯ ಮತ್ತು ಪುನರ್ವಸತಿಗಾಗಿ ಸಾಧ್ಯವಿರುವ ಅವಕಾಶಗಳನ್ನು ಕುರಿತು ನಮಗೆ ಬರೆದರು.

ಅದನ್ನನುಸರಿಸಿ, ನಾವು ಶೃಂಗೇರಿಯ ಮಹಿಳಾ ಮಂಡಳಿಯ ನೆರವಿನಿಂದ ಪೋಲೀಸರ ಮೂಲಕ ಆಕೆಯನ್ನು ಇಂಥ ಯಾವುದಾದರೊಂದು ಆಶ್ರಯಧಾಮಕ್ಕೆ ಸೇರಿಸಲು ಯತ್ನಿಸಿದೆವು

ಆದರೆ, ಆಕೆಯ ಮನೆಯವರ ಅಸಹಕಾರ, ಶೃಂಗೇರಿ ಪೋಲೀಸರ ಅರೆ-ಮನಸ್ಸು ಹಾಗೂ ಶೃಂಗೇರಿಗೆ ಪದೇ ಪದೇ ರಾಷ್ಟ್ರೀಯ 'ಗಣ್ಯ'ರ ಭೇಟಿಗಳು- ಮುಂತಾದುವುಗಳಿಂದಾಗಿ ಈ ಕಾರ್ಯ ಮುಂದೂಡುತ್ತಲೇ ಬಂತು. ಈ ಮಧ್ಯೆ ಈ ನಿರ್ಭಾಗ್ಯೆಯ ದುರವಸ್ಥೆ ಪದೇ ಪದೇ ಮರುಕಳಿಸುತ್ತಲೇ ಇತ್ತು.

ಈ ಬಗ್ಗೆ ನ.ರಾ.ಪುರದ ಖ್ಯಾತ ವಕೀಲರಾದ ಶ್ರೀಮತಿ ಶಶಿಕಲಾ ಉರಣ್ಕರ್ ಅವರು ತೀವ್ರ ಕಾಳಜಿ ವಹಿಸಿ, ಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್ ಮೂಲಕ ಹಲವು ಏರ್ಪಾಡುಗಳನ್ನು ಮಾಡಿಸಲು ಮುಂದಾದರು. ಶೃಂಗೇರಿಯ ಶ್ರೀಮತಿ ಶೈಲಜಾ ಹೆಗ್ಡೆ ಅವರೂ ಆಕೆಯ ದುಃಸ್ಥಿತಿಗೆ ಮರುಗಿ, ಆ ದಿಕ್ಕಿನಲ್ಲಿ ನಮ್ಮೊಂದಿಗೆ ಸಹಕರಿಸಲು ಸಿದ್ಧರಾದರು.

ಆದರೂ ಚುನಾವಣೆಯ ಅಬ್ಬರದಲ್ಲಿ ಈ ಯುವತಿಯ ಗೋಳು ಸಮಾಜಕ್ಕೆ ಲೆಕ್ಕಕ್ಕಿಲ್ಲದಾದಾಗ, ಗೆಳೆಯ ಕಲ್ಕುಳಿ ವಿಠಲ ಹೆಗ್ಡೆ ನ 18 ರಿಂದ ಶೃಂಗೇರಿ ಪೋಲೀಸ್ ಠಾಣೆಯೆದುರು ಉಪವಾಸದ ನೋಟೀಸು ನೀಡಿ, ಅಂದು ಸತ್ಯಾಗ್ರಹ ಹೂಡಲು ಅಣಿಯಾದರು.

ಇಷ್ಟಾದೊಡನೆ ಶೃಂಗೇರಿಯ ಸಬ್‌ಇನ್‌ಸ್ಪೆಕ್ಟರ್ ಪಾಪಯ್ಯ ಅವರು ಆ ಯುವತಿಯನ್ನು ಅವಳ ಪೋಷಕರೊಬ್ಬರ ಜೊತೆಯಲ್ಲಿ ಕರೆದುಕೊಂಡು ಹೋಗಿ ಚಿದಾನಂದ್ ಮತ್ತು ಶಶಿಕಲಾರ ನೆರವಿನಿಂದ ಶಿವಮೊಗ್ಗದ ಆಶ್ರಯಧಾಮಕ್ಕೆ ಸೇರಿಸಿ ಬಂದರು. ಈಗ ಆಕೆ ಅಲ್ಲಿ ಆರೋಗ್ಯದೊಂದಿಗೆ ಕ್ಷೇಮವಾಗಿದ್ದಾಳೆಂದು ಮತ್ತೊಮ್ಮೆ ಆಕೆಯನ್ನು ಭೇಟಿ ಮಾಡಿ ಬಂದ ಚಿದಾನಂದ್ ದಂಪತಿಗಳು ತಿಳಿಸಿದ್ದಾರೆ.

(ಈ ನಡುವೆ, ಈ ನತದೃಷ್ಟೆಯ ಮೇಲೆ ದೌರ್ಜನ್ಯ ನಡೆಸಿದವರಲ್ಲೊಬ್ಬರೆಂದು ನಮ್ಮ 16-7-89ರ ಲೇಖನದಲ್ಲಿ ಹೆಸರಿಸಲಾಗಿದ್ದ ಮೇಗೂರಿನ ಕಾಫಿ ತೋಟದ ಶ್ರೀಮಂತ ಎಲ್ಲಪ್ಪಯ್ಯ ಉರುಫ್ ಎಂ. ಜಿ. ಯಶವಂತ ರಾವ್ ನ.ರಾ. ಪುರದ ಕೋರ್ಟಿನಲ್ಲಿ ಪತ್ರಿಕೆಯ ಸಂಪಾದಕರು ಮತ್ತು ವರದಿಗಾರ ವಿಠಲ್‌ಹೆಗ್ಡೆ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಅವರ ಪರ ಕೊಪ್ಪದ ಎಚ್. ಡಿ. ನಾಯಕ್ ಮತ್ತು ಪ್ರತಿವಾದಿಗಳಾದ ನಮ್ಮ ಪರ ಶಶಿಕಲಾ ಉರಣ್ಕರ್ ನ್ಯಾಯವಾದಿಗಳಾಗಿದ್ದಾರೆ.)

—ಸಿರಿಮನೆ ನಾಗರಾಜ್.

ಕೋಮು ಸಾಮರಸ್ಯ ಹದಗೆಡಿಸುವುದು ಬೇಡ

ಚಿಕ್ಕಮಗಳೂರು ಜಿಲ್ಲೆ ಕಳೆದ ಹಲವು ವರ್ಷಗಳಿಂದ ಕೋಮು ಸೌಹಾರ್ದದ ಹಿನ್ನೆಲೆಯನ್ನು ಹೊಂದಿದೆ. ಜಿಲ್ಲೆಯಲ್ಲಿ ಎಲ್ಲಾ ಕೋಮುಗಳಿಗೆ ಸೇರಿದ ಜನರು ಕಷ್ಟ ಸುಖಗಳಲ್ಲಿ ಒಂದಾಗಿ ಬಾಳುತ್ತಾ ಬಂದಿದ್ದಾರೆ. ಇತ್ತೀಚೆಗೆ ಈ ಸೌಹಾರ್ದ ಸ್ಥಿತಿಯನ್ನು ಹದಗೆಡಿಸುತ್ತಿರುವ ಯತ್ನವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

ಧಾರ್ಮಿಕ ನಂಬಿಕೆಗಳು, ಚಟುವಟಿಕೆಗಳು, ಮತೀಯ ದ್ವೇಷಕ್ಕೆ ಅವಕಾಶವಾಗದಂತೆ ನೋಡಿಕೊಳ್ಳಬೇಕಾದ್ದು ಇಂದಿನ ಅನಿವಾರ್ಯ ಅವಶ್ಯಕತೆ.

ಕೋಮು ದ್ವೇಷಗಳು ಅಮೂಲ್ಯವಾದ ನಮ್ಮ ಮುಗ್ಧ ಜನರನ್ನು, ಮಕ್ಕಳು–ಮಹಿಳೆಯರನ್ನು ಬಲಿ ತೆಗೆದುಕೊಂಡಿರುವ ನೂರಾರು ಘಟನೆಗಳು ನಮ್ಮ ಮುಂದಿವೆ.

ಜನರ ಹಸಿವು, ಬಡತನದಂತಹ ನೂರಾರು ಸಮಸ್ಯೆಗಳ ಪರಿಹಾರದ ಬಗ್ಗೆ ಚಿಂತಿಸಲು ಅವಕಾಶ ನೀಡದೆ, ಕೇವಲ ಭಾವನಾತ್ಮಕ ಅಭಿಪ್ರಾಯಗಳ ಮೂಲಕ ದಿಕ್ಕು ತಪ್ಪಿಸುವ ಪ್ರಯತ್ನದಲ್ಲಿ ಜನರು ಗುಂಪುಗಳಾಗಿ ಒಡೆದುಹೋಗಬಾರದಾಗಿ ನಾವು ವಿನಂತಿಸುತ್ತೇವೆ.

ಸಮಾಜ ವಿರೋಧಿ, ಸ್ವಾರ್ಥ ಸಾಧಕ ದುಷ್ಟಶಕ್ತಿಗಳು ಕೋಮು ದ್ವೇಷದ ಲಾಭ ಪಡೆಯುವ ಪ್ರಯತ್ನ ನಡೆಸಿವೆ. ಕೋಟ್ಯಾಂತರ ರೂ. ಗಳ ಆಸ್ತಿಪಾಸ್ತಿಗಳ ನಷ್ಟವಾಗಿ ಜನರ ಬದುಕನ್ನೇ ಅವು ಬಲಿ ತೆಗೆದುಕೊಂಡಿವೆ.

ಕಳೆದ ಕೆಲವು ದಿನಗಳಿಂದ ನಮ್ಮ ಜಿಲ್ಲೆಯಲ್ಲಿ ಅಂತಹ ವಿನಾಶದತ್ತ ತಳ್ಳುವ ಪ್ರಯತ್ನಕ್ಕೆ ಕೆಲವು ಶಕ್ತಿಗಳು ಪ್ರಚೋದಿಸುತ್ತಿರುವುದು ಕಂಡು ಬರುತ್ತಿದೆ. ಹಿಂದು, ಮುಸ್ಲಿಂ, ಕ್ರೈಸ್ತ, ಸಿಖ್ ಮುಂತಾದ ಎಲ್ಲಾ ಧರ್ಮೀಯರು ಭಾರತದ ಪ್ರೀತಿಯ ಮಕ್ಕಳಾಗಿದ್ದು ದೇಶಭಕ್ತರಾದ ಎಲ್ಲಾ ಜನ ಇವರೆಲ್ಲರಿಗೆ ಸಮೃದ್ಧಿ, ಶಾಂತಿಯ ಬದುಕನ್ನು ಬಯಸಬೇಕಾಗಿದೆ.

ಜಿಲ್ಲೆಯ ಅಭಿವೃದ್ಧಿ, ಜನರ ಕುಡಿಯುವ ನೀರಿನ ಸಮಸ್ಯೆ, ರೈತರು, ಕಾರ್ಮಿಕರು, ವಿದ್ಯಾರ್ಥಿ–ಯುವಜನರು ಹಾಗೂ ಮಹಿಳೆಯರ ಸಮಸ್ಯೆಗಳ ವಿರುದ್ಧ ನಾವಿಂದು ಎಲ್ಲರೂ ಒಟ್ಟಾಗಿ ಹೋರಾಟ ನಡೆಸುವುದೇ ಮುಖ್ಯವಾಗಿದ್ದು ಆ ಬಗ್ಗೆ ಎಲ್ಲಾ ಧರ್ಮೀಯರು ಒಟ್ಟಾಗಿ ಶ್ರಮಿಸುವುದು ಮುಖ್ಯವಾದುದಾಗಿದೆ.

ಎಲ್ಲಾ ಧರ್ಮೀಯರು, ಸಮಾಜದ ಹಿತ ಚಿಂತಕರು ಈ ನಿಟ್ಟಿನಲ್ಲಿ ಚಿಂತಿಸಿ ಜಿಲ್ಲೆಯ ಅಭಿವೃದ್ಧಿಗೆ ಮುಂದಾಗಬೇಕೆಂದೂ, ಅದಕ್ಕಾಗಿ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗಬೇಕೆಂದೂ ನಾವು ವಿನಂತಿಸುತ್ತೇವೆ. ಆಗಿಂದಾಗ್ಗೆ ಉದ್ಭವಿಸುವ ಎಲ್ಲಾ ಸಮಸ್ಯೆಗಳಿಗೆ ಸೌಹಾರ್ದತೆಯಿಂದಲೇ ಪರಿಹಾರಗಳನ್ನು ಕಂಡುಕೊಳ್ಳಬೇಕೆಂದು ನಾವು ಜಿಲ್ಲೆಯ ಎಲ್ಲಾ ಜನರಿಗೆ,' ಮುಖ್ಯವಾಗಿ ಭವಿಷ್ಯದ ಸಂಕೇತವಾದ ವಿದ್ಯಾರ್ಥಿ–ಯುವಜನರಿಗೆ ಮನವಿ ಮಾಡುತ್ತೇವೆ.

–ಪಿ.ವಿ. ಲೋಕೇಶ್
–ಎಂ. ಡಿ. ಗಂಗಯ್ಯ
–ಎಚ್. ಎಚ್. ದೇವರಾಜ್
ಚಿಕ್ಕಮಗಳೂರು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ

ಕೊಪ್ಪ ವಿಭಾಗ, ಕೊಪ್ಪ.

ಮನವಿ ಹಾಗೂ ತಿಳುವಳಿಕೆ ಪತ್ರ

ಈ ಮೂಲಕ ಕಾಫಿ ಬೆಳೆಗಾರರಿಗೆ, ರೈತರಿಗೆ, ಕೂಲಿಗಾರರಿಗೆ ಹಾಗೂ ಇತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಅರಣ್ಯ ಸಂಪತ್ತು ದಿನೇ ದಿನೇ ಹಲವಾರು ಕಾರಣಗಳಿಂದಾಗಿ ಕ್ಷೀಣಿಸುತ್ತಿದೆ. ಅರಣ್ಯ ಸಂಪತ್ತು ಕ್ಷೀಣಿಸಲು ಕಾಡಿನ ಬೆಂಕಿಯು ಒಂದು ಪ್ರಧಾನ ಕಾರಣವಾಗಿದೆ. ಕಾಡಿನ ಬೆಂಕಿಯಿಂದಾಗಿ ಬೆಳವಣಿಗೆಯಲ್ಲಿರುವ ಅಮೂಲ್ಯ ಮರಗಳು, ಲಕ್ಷೋಪಲಕ್ಷ ಪುಟ್ಟ ಗಿಡಗಳು ಕಮರಿ ಹೋಗುವುದರೊಂದಿಗೆ ಬೆಲೆ ಬಾಳುವ ಒಣಗಿದ ಮರಗಳೂ ಸುಟ್ಟು ಹೋಗುತ್ತವೆ ಮತ್ತು ಮಣ್ಣಿನ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಇದಲ್ಲದೆ, ಕಾಡಿನಲ್ಲಿ ದೊರೆಯುವ ಹಲವು ಬಗೆಯ ಬೀಜಗಳು, ಜೇನು, ಸೊಪ್ಪು, ಗಿಡ ಮೂಲಿಕೆ ಮತ್ತು ಕಾಡಿನಲ್ಲಿ ವಾಸವಾಗಿರುವ ಹಲವು ಬಗೆಯ ಜೀವಿಗಳು ನಶಿಸಿ ಹೋಗುತ್ತವೆ. ಈ ರೀತಿಯ ನಾಶವನ್ನು ಮುಂದುವರಿಯಲು ಬಿಟ್ಟಲ್ಲಿ ಅರಣ್ಯ ಸಂಪತ್ತು ನಾಶವಾಗುವುದರ ಜೊತೆಗೆ ನಾವೂ ಕೂಡ ವಿನಾಶದತ್ತ ಸಾಗಬೇಕಾಗುತ್ತದೆ. ಬೇಸಿಗೆಯಲ್ಲಿ ಎಲ್ಲೆಡೆಯಲ್ಲಿಯೂ ಹಬ್ಬುತ್ತಿರುವ ಕಾಡಿನ ಬೆಂಕಿಯನ್ನು ಸರ್ಕಾರದ ಕಾರ್ಯಕ್ರಮಗಳಿಂದಲೇ ತಡೆಗಟ್ಟುವುದು ಸಾಧ್ಯವಾಗದು. ಇದಕ್ಕೆ ನಾಡಿನ ಎಲ್ಲಾ ಜನರೂ ಕಾಡಿನ ಬಗ್ಗೆ ಚಿಂತಿಸಿ ತಮ್ಮ ಸುತ್ತಮುತ್ತಲಿನ ಅರಣ್ಯವನ್ನು ಕಾಡ್ಗಿಚ್ಚಿಗೆ ಬಲಿಯಾಗದಂತೆ ನೋಡಿಕೊಂಡಲ್ಲಿ ಕಾಡನ್ನು ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ.

ಆದುದರಿಂದ ಎಲ್ಲಾ ಕಾಫಿ ಬೆಳೆಗಾರರಲ್ಲಿ, ರೈತರಲ್ಲಿ, ಕೂಲಿಕಾರರಲ್ಲಿ ಇತರ ಎಲ್ಲರಲ್ಲಿ ವಿನಂತಿಸುವುದೇನೆಂದರೆ, ಯಾವ ಕಾರಣಕ್ಕೂ ಕಾಡಿಗೆ ಬೆಂಕಿಯನ್ನು ಹಚ್ಚಬೇಡಿರಿ ಕಾಡಿನ ಬೆಂಕಿಯನ್ನು ಕಂಡಲ್ಲಿ ಅದನ್ನು ಆರಿಸಲು ಸ್ವ ಪ್ರೇರಣೆಯಿಂದ ಮುಂದಾಗಿರಿ. ಕಾಡಿನ ಬೆಂಕಿ ದೊಡ್ಡ ಪ್ರಮಾಣದಲ್ಲಿದ್ದರೆ ಹತ್ತಿರದ ಅರಣ್ಯ ಸಿಬ್ಬಂದಿಯವರಿಗೆ ತಿಳಿಸಿ ಆಗುವ ಅನಾಹುತವನ್ನು ತಪ್ಪಿಸಲು ಸಹಕರಿಸಿ. ಲೋಕೋಪಯೋಗಿ ಇಲಾಖೆಯ ರಸ್ತೆ ಕಾರ್ಮಿಕರು ರಸ್ತೆ ಕೆಲಸ ನಡೆಸುವಾಗ ಬೆಂಕಿ ರಸ್ತೆಯ ಪಕ್ಕದ ಅರಣ್ಯಕ್ಕೆ ಬೀಳದಂತೆ ನೋಡಿಕೊಳ್ಳುವುದರ ಜೊತೆಗೆ ಅಕ್ಕಪಕ್ಕದ ಕಾಡಿನಲ್ಲಿ ಬೆಂಕಿ ಕಂಡರೆ ಆರಿಸಲು ಪ್ರಯತ್ನಿಸಿರಿ. ಅಥವಾ ಹತ್ತಿರದ ಅರಣ್ಯ ಸಿಬ್ಬಂದಿಯವರಿಗೆ ತಿಳಿಸಿ ಕಾಡ್ಗಿಚ್ಚನ್ನು ತಡೆಯಲು ಸಹಕರಿಸಿರಿ. ಕಾಫಿ ಬೆಳೆಗಾರರು ವಿಶೇಷವಾಗಿ ಶ್ರಮ ವಹಿಸಿ ಕಾಡಿನ ಬೆಂಕಿಯನ್ನು ಆರಿಸಲು ಸಹಕರಿಸಿರಿ.

ಕಾಡಿಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳ ಬಗ್ಗೆ ಮಾಹಿತಿಯನ್ನು ಅರಣ್ಯಾಧಿಕಾರಿಗಳಿಗೆ ಅಥವಾ ಸಮೀಪದ ಪೋಲೀಸ್ ಅಧಿಕಾರಿಗಳಿಗೆ ಒದಗಿಸುವುದು ಹಾಗೂ ಬೆಂಕಿ ಆರಿಸಲು ಸಹಕರಿಸುವುದು. ಕರ್ನಾಟಕ ಅರಣ್ಯ ಅಧಿನಿಯಮ 105ನೆಯ ಪ್ರಕರಣದ ಪ್ರಕಾರ ಎಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ತಪ್ಪಿದಲ್ಲಿ ಅಂಥವರಿಗೆ ಒಂದು ತಿಂಗಳ ಶಿಕ್ಷೆ ಅಥವಾ 200–00 ರೂ. ದಂಡ ಅಥವಾ ಎರಡೂ ಶಿಕ್ಷೆ ವಿಧಿಸಲಾಗುವುದು.

ಕಾಡಿಗೆ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚುವುದು ಅಥವಾ ಬೆಂಕಿ ಹಚ್ಚಲು ಪ್ರೇರೇಪಿಸುವುದು ಕರ್ನಾಟಕ ಅರಣ್ಯ ಅಧಿನಿಯಮ 1963 ಮತ್ತು ಕರ್ನಾಟಕ ಅರಣ್ಯ ನಿಯಮಾವಳಿ 1969ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಅಂಥವರ ವಿರುದ್ಧ ಕಾನೂನಿನಂತೆ ಕ್ರಮ ಕೈಗೊಂಡು 1 ವರ್ಷ ಶಿಕ್ಷೆಗೆ ಗುರಿಪಡಿಸಲಾಗುವುದು. ಅಥವಾ ದಂಡ 2000–00 ರೂ. ಗಳವರೆಗೆ ವಸೂಲು ಮಾಡಲಾಗುವುದು. ಅಥವಾ ಎರಡೂ ಶಿಕ್ಷೆಗಳನ್ನು ವಿಧಿಸಲಾಗುವುದು. ಇದರೊಂದಿಗೆ ಹಾನಿಗೊಳಗಾದ ಅರಣ್ಯದ ಬೆಲೆಯನ್ನು ಮತ್ತು ಪರಿಸರದ ಮೇಲೆ ಉಂಟಾದ ದುಷ್ಪರಿಣಾಮಕ್ಕೆ ದಂಡವನ್ನು ಸಹ ವಿಧಿಸಿ ವಸೂಲು ಮಾಡಲಾಗುವುದು. ಅರಣ್ಯದಿಂದ ಸವಲತ್ತುಗಳನ್ನು ಪಡೆಯುತ್ತಿರುವ ಸಾರ್ವಜನಿಕರು ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಲು ಪ್ರಯತ್ನಿಸಿದರೆ ಅಥವಾ ಪ್ರೇರೇಪಿಸಿದರೆ ಅವರಿಗೆ ನೀಡುತ್ತಿರುವ ಸವಲತ್ತುಗಳನ್ನು ಮೊಟಕುಗೊಳಿಸಲಾಗುವುದು ಇಲ್ಲವೇ ನಿಲ್ಲಿಸಲಾಗುವುದರ ಜೊತೆಗೆ ಮೇಲ್ಕಂಡಂತೆ ಶಿಕ್ಷೆಗೆ ಗುರಿಪಡಿಸಲಾಗುವುದೆಂಬುದನ್ನು ತಿಳಿಯಬೇಕಾಗಿ ಕೋರಿದೆ.

ಸ್ಥಳೀಯ ಮಂಡಲ ಪಂಚಾಯ್ತಿಗಳು, ಪರಿಸರ ಪ್ರೇಮಿಗಳು, ಸಂಘ–ಸಂಸ್ಥೆಗಳು ಹಾಗೂ ಕಾಫಿ ಬೆಳೆಗಾರರು ತಮ್ಮ ವ್ಯಾಪ್ತಿಗೆ ಬರುವ ಕಾಡಿನ ಬೆಂಕಿಯನ್ನು ಆರಿಸಲು ಸ್ವಪ್ರೇರಣೆಯಿಂದ ಕ್ರಮ ಕೈಗೊಂಡಲ್ಲಿ ಕಾಡ್ಗಿಚ್ಚನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು. ತಮ್ಮ ವ್ಯಾಪ್ತಿಯಲ್ಲಿ ಬರುವ ಗ್ರಾಮಸ್ಥರಿಗೆ ಬೆಂಕಿಯಿಂದಾಗುವ ಪ್ರತ್ಯಕ್ಷ ಅನಾಹುತಗಳ ಬಗ್ಗೆ ತಿಳುವಳಿಕೆ ನೀಡಿ "ಅರಣ್ಯ ನಾಶ ನಮ್ಮೂರಿನ ನಾಶ" ಎಂಬ ಪ್ರಜ್ಞೆಯನ್ನು ಅವರಲ್ಲಿ ಮೂಡಿಸಿ, ಬೆಂಕಿ ಹರಡುವುದನ್ನು ಯಶಸ್ವಿಯಾಗಿ ತಡೆಗಟ್ಟಲು ಸಹಕರಿಸಿರಿ.

ಬೆಂಕಿ ತಡೆ ಕಾರ್ಯದಲ್ಲಿ ಸಹಕರಿಸಲು ಮುಂದೆ ಬರುವ ಕೆಲಸಗಾರರಿಗೆ ಆ ಕಾರ್ಯದ ವೇಳೆಯಲ್ಲಿ ಆಹಾರ ಹಾಗೂ ಸಂಬಳವನ್ನು ಇಲಾಖೆಯ ವತಿಯಿಂದ ನೀಡಲಾಗುವುದು.

ಬಹೂಪಯೋಗಿ ಅರಣ್ಯ ಸಂಪತ್ತನ್ನು ಕಾಡ್ಗಿಚ್ಚಿನಿಂದ ಉಳಿಸಲು ನಿಮ್ಮ ಕೈಲಾದ ಎಲ್ಲಾ ಸಹಕಾರವನ್ನು ಅರಣ್ಯ ಇಲಾಖೆಗೆ ನೀಡಿ ಸಹಕರಿಸಿರಿ.

ತಾರೀಖು : 1.12.89.

ಕಿಶನ್ ಸಿಂಘ್ ಸುಗರಾ,
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ.

ಕೊಪ್ಪ ಅರಣ್ಯ ವಿಭಾಗದಲ್ಲಿಯ ಎಲ್ಲಾ ಕಾಫಿ ಬೆಳೆಗಾರರಿಗೆ, ರೈತರಿಗೆ, ಕಾರ್ಮಿಕರಿಗೆ ಮತ್ತು ಇತರ ಸಾರ್ವಜನಿಕರಿಗೆ.

ಕೋಮು ಸೌಹಾರ್ದಕ್ಕಾಗಿ, 'ಮಾನವ ಸರಪಳಿ'

ಚಿಕ್ಕಮಗಳೂರು : ಕಳೆದ ಕೆಲ ತಿಂಗಳುಗಳಿಂದ ಜಿಲ್ಲೆಯಲ್ಲಿ ಕೋಮು ದ್ವೇಷ ಬಿತ್ತುವಂಥ ತಂತ್ರ, ಪ್ರಯತ್ನಗಳು ಸಾಗಿರುವ ಹಿನ್ನೆಲೆಯಲ್ಲಿ, ಜನವರಿ ತಿಂಗಳಲ್ಲಿ ವಿಭಿನ್ನ ಧರ್ಮಗಳಿಗೆ ಸೇರಿದ ಜನ ಒಂದಾಗಿ, 'ಮಾನವ ಸರಪಳಿ' ನಿರ್ಮಿಸಿ, ಪ್ರತಿಜ್ಞೆ ಸ್ವೀಕರಿಸುವ ಕಾರ್ಯಕ್ರಮವನ್ನು ಸಿಪಿಐ, ದಲಿತ ಸಂಘರ್ಷ ಸಮಿತಿ ಮತ್ತು ರೈತ ಸಂಘ ಒಟ್ಟಾಗಿ ರೂಪಿಸಲಿವೆ.

ಓದುಗರ ಪತ್ರ

ಗುಣ ದೋಷ ತಿಳಿಸಿಕೊಡುವ ಪರಿಣಾಮಕಾರಿ ಲೇಖನ

ಮಿತ್ರ, ನಾಗರಾಜ್,

ತಾ॥ 10–12–89ರ ಸಂಚಿಕೆಯಲ್ಲಿ ಪ್ರಕಟಿಸಿದ "ಚುನಾವಣೆಯ ಪಾಠಗಳು— ಗೆದ್ದವರಿಗೂ ಸೋತವರಿಗೂ" ಎಂಬ ನಿಮ್ಮ ಲೇಖನ ಪರಿಣಾಮಕಾರಿಯಾಗಿದೆ. ನಿಷ್ಪಕ್ಷಪಾತವಾಗಿದ್ದು, ಅವರವರ ತಪ್ಪನ್ನು ಅವರವರಿಗೆ ತೋರಿಸಿಕೊಡುವಂತಿದೆ.

ಗುಣ–ದೋಷಗಳನ್ನು ತಿಳಿಸುವ ಇಂತಹ ಲೇಖನ ಆಗಿಂದಾಗ ಬರುತ್ತಿರಲಿ.

–ಶಾಲಿ ಎಸ್. ವಿ. ಮಲ್ಲಿಕಾರ್ಜುನಸ್ವಾಮಿ

ಮಂಡಳಿಗೆ ಕಾಫಿ ಕಳಿಸಿದ ಪತ್ರ ಏ.1ರಿಂದ ಚಿಕ್ಕಮಗಳೂರಲ್ಲೇ ಲಭ್ಯ

ಚಿಕ್ಕಮಗಳೂರು : ಕಾಫಿ ಬೆಳೆಗಾರರು ಕಾಫಿ ಮಂಡಳಿಗೆ ಕಳುಹಿಸುವ ಕಾಫಿಗೆ ಸಂಬಂಧಿಸಿದ ಲೆಕ್ಕ ಪತ್ರ ವ್ಯವಹಾರದ ಮಾಹಿತಿ ಏಪ್ರಿಲ್ 1 ರಿಂದ ಚಿಕ್ಕಮಗಳೂರಿನಲ್ಲೇ ದೊರೆಯುವಂತೆ ಏರ್ಪಾಡು ಮಾಡಲಾಗುತ್ತಿದೆ.

ಈ ಮೊದಲು ಈ ಬಗೆಗಿನ ಪ್ರತಿಯೊಂದು ಲೆಕ್ಕಪತ್ರ ಪರಿಶೀಲನೆಗಾಗಿ ಬೆಂಗಳೂರಿಗೆ ಹೋಗಬೇಕಾಗಿತ್ತು. ಕಾಫಿ ಮಂಡಳಿಯ ಕಛೇರಿಗಾಗಿ ಜಿಲ್ಲಾಧಿಕಾರಿಗಳು 5 ಎಕರೆ ನಿವೇಶನ ಮಂಜೂರು ಮಾಡಿದ್ದು, ಒಂದೇ ಕಡೆಯಲ್ಲಿ ಕಟ್ಟಡ ಕಟ್ಟಲು ನಿರ್ಧರಿಸಲಾಗಿದೆ.

ಈ ವಿಚಾರಗಳನ್ನು ಮಲ್ಲಂದೂರಿನಲ್ಲಿ ನಡೆದ ಕಾಫಿ ವಿಚಾರ ಸಂಕಿರಣದಲ್ಲಿ ಕಾಫಿ ಮಂಡಳಿ ಸದಸ್ಯ ಎಚ್. ಡಿ. ರಾಮೇಗೌಡ ತಿಳಿಸಿದರು.

ನಾರ್ವೆಯಲ್ಲಿ ಉಚಿತ ಕಾನೂನು ನೆರವು ಶಿಬಿರ

ನಾರ್ವೆ : ಕಾನೂನು ನೆರವು ಸಮಿತಿ ವತಿಯಿಂದ ಇಲ್ಲಿ ಡಿ. 17 ರಂದು ನಡೆದ ಉಚಿತ ಕಾನೂನು ನೆರವು ಶಿಬಿರವನ್ನು ಮಂಡಲ ಪ್ರಧಾನ ಕೆ. ಎಸ್. ಕಾಡಪ್ಪ ಗೌಡರ ಅಧ್ಯಕ್ಷತೆಯಲ್ಲಿ ಸದಸ್ಯ ರಾಘವೇಂದ್ರರಾವ್ ಉದ್ಘಾಟಿಸಿದರು.

ವಕೀಲರಾದ ರಾಮರಾವ್, ರತ್ನರಾಜು, ಜಿ.ಎಂ. ವಿಶ್ವನಾಥ್ ಕಾನೂನು ಸಲಹೆ ನೀಡಿದರು. ಸಮಿತಿ ಕಾರ್ಯದರ್ಶಿ ಪಿ.ಆರ್. ಶ್ರೀನಿವಾಸಮೂರ್ತಿ ವಂದಿಸಿದರು.

ಡಿ. 30, 31 ಹರಿಹರಪುರದಲ್ಲಿ ತಾ|| ಯುವಜನ ಮೇಳ

ಕೊಪ್ಪ: ಜಿಲ್ಲಾ ಯುವಜನ ಸೇವಾ ಇಲಾಖೆಯ ವತಿಯಿಂದ ಈ ವರ್ಷದ ತಾಲ್ಲೂಕು ಯುವಜನ ಮೇಳ ಹರಿಹರಪುರದಲ್ಲಿ ಡಿ 30 ಮತ್ತು 31ರಂದು ಕಿರಿಯ ಕಾಲೇಜು ಆವರಣದಲ್ಲಿ ನಡೆಯಲಿದೆ. ತಾ|| ಪಂ| ಸಮಿತಿ, ಹರಿಹರಪುರದ ಅಭಿನವ ಯುವಕ ಸಂಘ, ಮಂಡಲ ಪಂಚಾಯ್ತಿ ಮತ್ತು ನಾಗರಿಕ ಸಮಿತಿ ಹಾಗೂ ಬೊಮ್ಲಾಪುರದ ಸಹ್ಯಾದ್ರಿ ಯುವಕ ಸಂಘ—ಇವುಗಳ ಸಹಕಾರದೊಂದಿಗೆ ತಾ|| ಯುವಜನ ಒಕ್ಕೂಟ ಜವಾಬ್ದಾರಿ ಹೊತ್ತಿರುವ ಈ ಮೇಳವನ್ನು ಡಿ. 30ರ ಬೆಳಿಗ್ಗೆ 10 ಗಂಟೆಗೆ ಶಾಸಕ ಯು ಕೆ. ಶಾಮಣ್ಣ ಉದ್ಘಾಟಿಸುತ್ತಾರೆ.

ನೂತನ ಶಾಸಕರಿಗೆ ಮೂರು ಸಲಹೆಗಳು

ಮಾನ್ಯರೆ,

ಶೃಂಗೇರಿ ಕ್ಷೇತ್ರದ ನೂತನ ಶಾಸಕರಾಗಿ ಅತ್ಯಂತ ಹೆಚ್ಚಿನ ಬಹುಮತದಿಂದ ಆಯ್ಕೆಯಾಗಿರುವ ಶ್ರೀಯುತ ಯು. ಕೆ ಶಾಮಣ್ಣನವರು ಸಾರ್ವಜನಿಕರ ಉಪಯೋಗಕ್ಕಾಗಿ ಈ ಕೆಳಗಿನ ಕೆಲವು ಪ್ರಾಮುಖ್ಯವಾದ ಕೆಲಸಗಳನ್ನು ನೆರವೇರಿಸಬೇಕೆಂದು ನಿಮ್ಮ ಪತ್ರಿಕೆಯ ಮೂಲಕ ಅವರ ಗಮನಕ್ಕೆ ತರಬಯಸುತ್ತೇನೆ.

ಓದುಗರ ಪತ್ರ

1. ಹಳೆಯ ಡಾಮರು ರಸ್ತೆಗಳನ್ನು ನವೀಕರಿಸುವುದು ಹಾಗೂ ಲೋಕೋಪಯೋಗಿ ಇಲಾಖೆಯ ಮೂಲಕ ಅಗಲಗೊಳಿಸುವುದು ;

2. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಯೋಗ್ಯರಾದ ಸಾಕಷ್ಟು ಸಂಖ್ಯೆಯ ಶಿಕ್ಷಕರನ್ನು ನೇಮಕ ಮಾಡುವುದು ;

3. ನಿರುಪಯೋಗಿಯಾಗಿರುವ ಸರ್ಕಾರಿ ಆಸ್ಪತ್ರೆಗಳಿಗೆ ಉತ್ತಮ ವೈದ್ಯರು ಮತ್ತು ಸಾಕಷ್ಟು ಔಷಧಿ ಒದಗಿಸುವುದು.

— ಹಿಂದೆ ಯಾರೂ ಮಾಡಿರದ ಈ ಮೂರು ಕಾರ್ಯಗಳನ್ನು ಯಶಸ್ವಿಗೊಳಿಸಿ, ಶಾಮಣ್ಣ ಜನಪ್ರಿಯರಾಗಲಿ

— ಮಿಗಾ ಜಗದೀಶ್.

ಹರಿಕಥಾ ಕಲಾವಿದರಿಗಾಗಿ ಆದಿಚುಂಚನಗಿರಿಯಲ್ಲಿ

ಕಥಾ ಕೀರ್ತನ ಕಾರ್ಯಾಗಾರ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಯುವ ಹರಿಕಥಾ ಕಲಾವಿದರ ಜ್ಞಾನ ಮಟ್ಟವನ್ನು ಹೆಚ್ಚಿಸಿ ಮೆರುಗು ಕೊಡುವ ಉದ್ದೇಶದಿಂದ ಕಥಾಕೀರ್ತನ ಕಾರ್ಯಾಗಾರವೊಂದನ್ನು ಏರ್ಪಡಿಸಿದೆ. ಇದು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ಇಲ್ಲಿ ದಿನಾಂಕ. 26-1-90 ರಂದು (ಶ್ರೀ ಪುರಂದರ ದಾಸರ ಪುಣ್ಯ ದಿನದಂದು) ಪ್ರಾರಂಭವಾಗಿ ದಿನಾಂಕ. 4-2-1990 ರವರೆಗೆ ನಡೆಯುವುದು

ಈ ಕಾರ್ಯಾಗಾರಕ್ಕೆ 25 ಯುವ ಕಲಾವಿದರನ್ನು ಆಯ್ಕೆ ಮಾಡಲಾಗುವುದು.

ಈ ಕಾರ್ಯಾಗಾರದಲ್ಲಿ ಭಾಗವಹಿಸುವ ಕಲಾವಿದರಿಗೆ ವಯಸ್ಸು 30ರ ಒಳಗೆ ಇರಬೇಕು. ಪ್ರತಿಭಾ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ರಿಯಾಯತಿ ತೋರಲಾಗುವುದು. ಕಾರ್ಯಾಗಾರದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಊಟ, ವಸತಿ ಹಾಗೂ 100 ರೂ.ಗಳ ಗೌರವ ಸಂಭಾವನೆಯನ್ನು ಕೊಡಲಾಗುವುದು. ಮಹಿಳಾ ಅಭ್ಯರ್ಥಿಗಳಿಗೆ ವಿಶೇಷ ಏರ್ಪಾಡು ಮಾಡಲಾಗುವುದು.

ಈ ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಛಿಸುವವರು ನಿಗದಿತ ಅರ್ಜಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, 14-3, ಕೆನರಾ ಫೈನಾನ್ಸ್ ಕಾರ್ಪೋರೇಷನ್ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು ಇವರಿಂದ ಅಂಚೆಯ ಮೂಲಕ ಅಥವಾ ಖುದ್ದಾಗಿ ಪಡೆಯಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ. 1-1-1990ರ ಒಳಗೆ ಅಕಾಡೆಮಿಗೆ ತಲುಪಿಸಲು ಕೋರಿದೆ.

ವಿಷ ಸೇವಿಸಿ ಆತ್ಮಹತ್ಯೆ

ಕೊಪ್ಪ : ಗುಣವಂತೆ ಮಣಿಪುರದ ಜೋಸೆಫ್-ಡಿ' ಸಿಲ್ವ (45) ಡಿ. 21 ರ ರಾತ್ರಿ ವಿಷ ಸೇವಿಸಿ, ಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಜೀವನದಲ್ಲಿ ಜಿಗುಪ್ಸೆಯೇ ಆತ್ಮಹತ್ಯೆಗೆ ಕಾರಣವೆನ್ನಲಾಗಿದೆ. ದಫೇದಾರ್ ಗಂಗಪ್ಪ ಕೇಸು ದಾಖಲು ಮಾಡಿಕೊಂಡು ಕ್ರಮ ಜರುಗಿಸಿದ್ದಾರೆ.

ಕ್ವಿಜ್ ಸ್ಪರ್ಧೆ ವಿಜೇತರು

ಕೊಪ್ಪ : ಹರಿಹರಪುರ ಕಿರಿಯ ಕಾಲೇಜಿನ ಎ. ಎಸ್. ರವಿಕುಮಾರ್, ಕೆ. ಎ. ಅನಿಲ್ ಕುಮಾರ್, ಟಿ. ಕೆ. ಸುಧೀಂದ್ರ ಇವರ ತಂಡ ಇಲ್ಲಿನ ಜೂನಿಯರ್ ಛೇಂಬರ್ ಸಪ್ತಾಹದ ಅಂಗವಾಗಿ ನಡೆದ ಕ್ವಿಜ್ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದರು. ಕೊಪ್ಪ ಪ್ರ.ದ. ಕಾಲೇಜು ಮತ್ತು ಆಯುರ್ವೇದ ಕಾಲೇಜು ತಂಡಗಳು 2ನೇ ಬಹುಮಾನ ಹಂಚಿಕೊಂಡವು. ಕೊಪ್ಪ ಕೀ ಕಾಲೇಜು ತಂಡ ಕೇವಲ 5 ಅಂಕಗಳಿಂದ ಬಹುಮಾನ ತಪ್ಪಿಸಿಕೊಂಡಿತು.

ಪೇಟೆ ಧಾರಣೆ

ಅಡಿಕೆ

ಶಿವಮೊಗ್ಗ : 21-12-1989

ಸರಕು : 3000-3770

ಬೆಟ್ಟೆ : 2200-2850

ಗೊರಬಲು : 1000-1900

ಸಾಗರ : 21.12.1989

ಇಡಿ : 2200-2856

ಚಾಲಿ : 2292-2805

ಆಪಿ : 3659-4069

ಸಿಪ್ಪೆ ಗೋಟು : 1000-1319

ಏಲಕ್ಕಿ

ಕೊಪ್ಪ 17-12-1989

230-320

"ಪಂಚಾಯತ್ ರಾಜ್" ಚರ್ಚಾ ಸ್ಪರ್ಧೆ

ಶೃಂಗೇರಿ: "ಪಂಚಾಯತ್‌ರಾಜ್ ವ್ಯವಸ್ಥೆಯಿಂದಲೇ ದೇಶದ ಪ್ರಗತಿ ಮತ್ತು ಪ್ರಜಾಪ್ರಭುತ್ವದ ಹಿತ ಸಾಧ್ಯ" ಎಂಬ ವಿಷಯ ಕುರಿತು ಇಲ್ಲಿನ ಜೆ. ಸಿ. ಬಿ ಎಂ. ಕಾಲೇಜಿನ ಕಲಾ ಸಂಘದ ಆಶ್ರಯದಲ್ಲಿ ಕುವೆಂಪು ವಿ.ವಿ. ಮಟ್ಟದ ಚರ್ಚಾ ಸ್ಪರ್ಧೆಯನ್ನು ಡಿ 16ರಂದು ಏರ್ಪಡಿಸಲಾಗಿತ್ತು ಏಳು ಕಾಲೇಜುಗಳ ಪ್ರತಿನಿಧಿಗಳು ಭಾಗವಹಿಸಿದ್ದು, ಮೊದಲ 3 ಬಹುಮಾನಗಳನ್ನು ಕ್ರಮವಾಗಿ: ಉಮಾ (ಎಸ್.ಟಿ.ಜೆ. ಮಹಿಳಾ ಕಾಲೇಜ್, ಚಿಕ್ಕಮಗಳೂರು), ಪ್ರಣೀತ (ಜೆ.ಸಿ.ಬಿ.ಎಂ. ಕಾಲೇಜ್, ಶೃಂಗೇರಿ). ಮತ್ತು ವೆಂಕಟೇಶ್ (ಸಹ್ಯಾದ್ರಿ ಕಾಲೇಜ್, ಶಿವಮೊಗ್ಗ) ಪಡೆದುಕೊಂಡರು.

ಪ್ರಿನ್ಸಿಪಾಲ್ ಕೃಷ್ಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಚರ್ಚಾಸ್ಪರ್ಧೆಯನ್ನು ಇತಿಹಾಸ ಉಪನ್ಯಾಸಕರಾದ ಕೃಷ್ಣಸ್ವಾಮಿ ಉದ್ಘಾಟಿಸಿದರು. ಕಲಾ ಸಂಘದ ಅಧ್ಯಕ್ಷ ಸುರೇಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀನಿವಾಸ್ ಸ್ವಾಗತಿಸಿ, ಶಶಿಕಲ ವಂದಿಸಿದರು. (ವರದಿ: ವೈ ಗ. ಜಗದೀಶ್)

ಜಿ. ಎಂ. ಭಟ್ ಅಲ್ಲ, ಜಿ. ಎಂ. ಹೆಗಡೆ

ಶೃಂಗೇರಿ: ಡಿ. 6ರಂದು ಇಲ್ಲಿನ ಜೆಸಿಬಿಎಂ ಕಾಲೇಜಿನಲ್ಲಿ ನಡೆದ ಬೇಂದ್ರೆ ಕಾವ್ಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ|| ವಾಮನ ಬೇಂದ್ರೆಯವರ ಸ್ನೇಹಿತರೂ, ಕಿಟ್ಟೆಲ್ ಕಾಲೇಜಿನ ಉಪನ್ಯಾಸಕರೂ ಆದ ಜಿ. ಎಂ. ಹೆಗಡೆ ಅವರೂ ಭಾಗವಹಿಸಿದ್ದರು. ಅವರು ಕೂಡ ಡಾ|| ದ. ರಾ. ಬೇಂದ್ರೆಯವರ ಕಾವ್ಯದ ಬಗ್ಗೆ ಉತ್ತಮ ಅಧ್ಯಯನ ನಡೆಸಿದವರು.

(ಡಿ. 17ರ 'ಮುಂಜಾವು'ನಲ್ಲಿ ಜಿ.ಎಂ. [illegible] ಎಂದು ತಪ್ಪಾಗಿರುವುದಕ್ಕಾಗಿ ವಿಷಾ[illegible] —ಸಂ.)

ನ. ರಾ. ಪುರ ತಾ|| ಜಾನಪದ ಕಲಾಮೇಳ

ಬಾಳೆಹೊನ್ನೂರು : ಇಲ್ಲಿಗೆ ಸಮೀಪದ ಮಾಗುಂಡಿಯಲ್ಲಿ ಅಲ್ಲಿನ ನಿರ್ಮಲ ಮಹಿಳಾ ಸಮಾಜ ಹಾಗೂ ಚಿಕ್ಕಮಗಳೂರಿನ ನೆಹರು ಯುವ ಕೇಂದ್ರದ ಆಶ್ರಯದಲ್ಲಿ ನ. ರಾ. ಪುರ ತಾ|| ಮಟ್ಟದ ಜಾನಪದ ಕಲಾಮೇಳ ಡಿ. 26ರ ಮಂಗಳವಾರ ಮಧ್ಯಾಹ್ನ 2 ಗಂಟೆಯಿಂದ ನಡೆಯಲಿದೆ.

ಈ ಕಲಾ ಮೇಳದಲ್ಲಿ ಯುವತಿಯರಿಗಾಗಿ ಬೀಸೋಕಲ್ಲಿನ ಪದ ಹಾಗೂ ಯುವಕ-ಯುವತಿಯರಿಗಾಗಿ ಜಾನಪದ ನೃತ್ಯ, ಕೋಲಾಟ, ಗೀಗೀ ಪದ, ಜಾನಪದ ಗೀತೆ ಮತ್ತು ಭಜನೆ ಸ್ಪರ್ಧೆಗಳು ನಡೆಯುತ್ತವೆ. ಸ್ಪರ್ಧಿಗಳಿಗೆ ಉಚಿತ ಊಟ, ವಸತಿ ಏರ್ಪಡಿಸಲಾಗಿದೆ.

ರಾತ್ರಿ 8 ಗಂಟೆಗೆ ಯಶೋದಮ್ಮ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದಲ್ಲಿ ಜಿ. ಪ. ಸದಸ್ಯೆ ಬಿ.ಸಿ. ಗೀತಾ ಬಹುಮಾನ ವಿತರಣೆ ಮಾಡುತ್ತಾರೆ.

ಪರ್ಸ್ ಕಳೆದಿದೆ

ತಾ|| 19-12-89 ನೇ ಮಂಗಳವಾರ ಬೆಳಿಗ್ಗೆ ಸುಮಾರು 10-30ರ ಹೊತ್ತಿನಲ್ಲಿ ಬಾಳಗಡಿ ಶಾಲೆಯ ಹಿಂಭಾಗದ ರಸ್ತೆಯಲ್ಲಿ ನಸ್ಯ ಬಣ್ಣದ ಚರ್ಮದ ಒಂದು ಪರ್ಸ್ ಕಳೆದುಹೋಗಿದೆ.

ವಾಹನಗಳಿಗೆ ಸಂಬಂಧಪಟ್ಟ ಕೆಲವು ದಾಖಲಾತಿಗಳು ಹಾಗೂ ಸ್ವಲ್ಪ ಹಣ ಇದ್ದ ಈ ಪರ್ಸ್ ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ತಲುಪಿಸಲು ಕೋರಿದೆ. ಸೂಕ್ತ ಬಹುಮಾನವುಂಟು.

ಕೆ. ಎಸ್. ಚಂದ್ರಶೇಖರ್
ವೀರಭದ್ರ ದೇವಸ್ಥಾನದ ಪಕ್ಕದ ಅಂಗಡಿ
ಮೇಲಿನಪೇಟೆ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಶಿರಿಮನೆ ನಾಗರಾಜ್, ಅಚ್ಚು : ದೀಪಟಿಗೆ ಅಚ್ಚು ಕೂಟ, ಕೊಪ್ಪ.